





ಸಿದ್ಧಲಿಂಗ ಪಟ್ಟಣಶೆಟ್ಟಿ

# ನಾದಸೇವಕನ ಅಂತರಂಗದ ಗೀತೆ

ಸಾಲಿ ರಾಮಚಂದ್ರ ರಾಯರ ‘ಹಂಬಲು’ ಕವನಕ್ಕೆ ಈಗ ನೂರಾಹತ್ತು ವರ್ಷದ ಹರ್ಷ. ಈ ಕವನ ತನ್ನ ‘ನೂತನತೆ’, ‘ಮೋಹಕತೆ’, ಮಹತ್ವವನ್ನು ಈಗಲೂ ಮೆರೆಸುತ್ತಿರುವಂತಿದೆ. ಸಾಲಿಯವರು ತಮ್ಮ ಆಯುಷ್ಯದುದ್ದಕ್ಕೂ (1888-1978) ಇದೇ ಹಂಬಲವನ್ನು ಉಂಡಿದ್ದರು, ಉಟ್ಟಿದ್ದರು, ಬರೆದಿದ್ದರು, ಬದುಕಿದ್ದರು. ಈ ಕವನವನ್ನು ಅವರು ರಚಿಸಿದ್ದು, ಹಾಡಿದ್ದು ಪುಣೆಯಲ್ಲಿ, 1916ರಲ್ಲಿ. ಆಗ ಡೆಕ್ಕನ್ ಕಾಲೇಜಿನಲ್ಲಿ ಬಿ.ಎ. ಕಲಿಯುತ್ತಿದ್ದರು. ಮೊಹರೆ ಹಣಮಂತರಾವ್, ದೇಶಪಾಂಡೆ ರುಕ್ಮಾಂಗದ ರಾವ್, ರಂ.ಕೃ. ಅಸುಂಡಿ, ಬಿ.ಎ. ದಾತಾರ, ರಾಮರಾವ್ ಬೆಳವಿ ಮೊದಲಾದ ಕನ್ನಡದ ಒಂಬತ್ತು ಮಂದಿ ಕೂಡಿ ಕಲಿಯುತ್ತಿದ್ದರು. ಅವರು ತಮ್ಮ ಗುಂಪಿಗೆ ‘ನೈನ್ ಪಾಯಿಂಟ್ ಸರ್ಕಲ್’ ಎಂದು ಹೆಸರಿಟ್ಟುಕೊಂಡಿದ್ದರು. ಇದು ಆದಿ, ಅಂತ್ಯವಿರದ ಸರ್ವಸಮಾನರ ‘ನವಬಿಂದು ವರ್ತುಳ’ವಾಗಿತ್ತು. ಅವರು ನಗರ ಮಧ್ಯದಲ್ಲಿರುವ ಮುಳಾ-ಮುಠಾ ನದಿಯ ಸಂಗಮ-ತಟದಲ್ಲಿ ಆಗಾಗ ಕೂಡುತ್ತಿದ್ದರು. ತಮ್ಮ ಜೀವನದ ಆದರ್ಶ, ಉದ್ದೇಶ, ಹಂಬಲು ಇತ್ಯಾದಿ ಕುರಿತು ಚರ್ಚಿಸುತ್ತಿದ್ದರು. ಇಂಥದೇ ಒಂದು ಸಂದರ್ಭದಲ್ಲಿ ಸಾಲಿಯವರು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದ ‘ಹಂಬಲು’ ಕವನದ ಮೂಲಕ ತಮ್ಮ ಆದರ್ಶವನ್ನು ವ್ಯಕ್ತಪಡಿಸಿದ್ದರು.

ಕೆಲ ದಿನಗಳ ನಂತರ, ಒಮ್ಮೆ ಪುಣೆಗೆ ಆಗಮಿಸಿದ್ದ ಆಲೂರ ವೆಂಕಟರಾಯರ ಭಾಷಣದ ನಂತರ, ಗೆಳೆಯರ ಒತ್ತಾಸೆಯಂತೆ ಸಾಲಿಯವರು ಈ ಕವನವನ್ನು ವಾಚಿಸಿದರು. ಇದರೊಳಗಿನ ಚಿಂತನ, ದೇಶಭಕ್ತಿಯ ಉತ್ಕಟ ಭಾವನೆ, ಬದುಕಿನ ಎಂಥ ಪರಿಸ್ಥಿತಿಯಲ್ಲಿಯೂ ಹೊಂದಿಕೊಳ್ಳಲು ತರುಣರಿಗೆ ನೀಡಿದ ಪ್ರೇರಣೆ, ಪ್ರತಿಯೊಬ್ಬ ಭಾರತೀಯನು ಸಾಧಿಸಬೇಕಿರುವ ‘ಹಂಬಲ’ವನ್ನು ಮನಗಂಡ ವೆಂಕಟರಾಯರು ಆ ಕವಿತೆಯನ್ನು ಪಡೆದುಕೊಂಡರು. ಧಾರವಾಡಕ್ಕೆ ಮರಳಿ, ಅದನ್ನು ‘ವಾಗ್ಭೂಷಣ’ ಪತ್ರಿಕೆಯಲ್ಲಿ ಪ್ರಕಟಿಸಿದರು. ಇದು ಸಾಲಿಯವರ ಪ್ರಪ್ರಥಮ ಪ್ರಕಟಿತ ಕವನ. ಕನ್ನಡ ಕಾವ್ಯಕ್ಕೆ, ಸಮಾಜಕ್ಕೆ ಸಾಲಿಯವರ ಆತ್ಮಬೋಧನೆ.

ರಾಮಚಂದ್ರ ರಾಯರು ತಾರುಣ್ಯದಲ್ಲಿಯೇ, ವಿದ್ಯಾರ್ಥಿಜೀವನದಲ್ಲಿಯೇ, ಮೂಡಿಸಿಕೊಂಡ ಆದರ್ಶವನ್ನು, ತನ್ನ ಬದುಕು, ನಾಡು, ನುಡಿ, ಭಾರತ ಭೂಮಿ ಮತ್ತು ಗಾಂಧೀಪ್ರಣೀತ ಜೀವನನಿಷ್ಠೆಯನ್ನು